
**‘ಮಯೂರ’ದ 50 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಆಯ್ದು ಈ ಅಂಕಣ ಓದುಗರ ಮುಂದಿಡುತ್ತದೆ. 1989ರ ನವೆಂಬರ್ ಸಂಚಿಕೆಯಿಂದ ಆಯ್ದ ಕತೆ ಇಲ್ಲಿದೆ**



ಚಿತ್ರ: ಮನೋಹರ್ ಆಚಾರ್ಯ

ನಾಳೆಗಳಲ್ಲಿ ಬದುಕುವ
ನಾನು ನಿನ್ನೆಗಳ ನೆರಳನ್ನು
ಒತ್ತರಿಸುವುದು
ಅನಿವಾರ್ಯ

ನನ್ನ ಕಾರ್ಖಾನೆ ಬಸ್ಸು ಮಲ್ಲೇಶ್ವರಂ ಸ್ಟಾಪ್ ಬಳಿಗೆ ಬರುತ್ತಿದ್ದಂತೆ ನನ್ನ ಕಣ್ಣುಗಳು ಕಿಟಕಿಯತ್ತ ಹರಿಯುತ್ತವೆ. ಅಲ್ಲಿ ಕಾರ್ಮಿಕರ ಬಸ್ಸಿಗಾಗಿ ಕಾಯುತ್ತಾ ನಿಂತ ರವಿ ಕಾಣುತ್ತಾನೆ. ನನ್ನ ಮುಖ ಕಂಡೊಡನೆ ಮುಗುಳ್ನಗುತ್ತಾನೆ. “ಸಂಜೆ ಸಿಗ್ತೀಯಾ? ಎಲ್ಲಿ? ಯಾವಾಗ?” ಕೇಳುತ್ತಾನೆ. ಇತ್ತೀಚೆಗೆ ನನ್ನಲ್ಲಿ ಸಂಜೆಗೆಂದು ಕಲೆ ಹಾಕಿದ ಸಬೂಬುಗಳು ಮುಗಿದು “ಹಾಂ ಬರ್ತೀನಿ...” ಎಂದೇನೋ ಅರೆಬರೆ ನನಗೇ ಕೇಳಿಸದಂತೆ ತಡವರಿಸಿ “ಬೈ...” ಎನ್ನುತ್ತೇನೆ.

ಬೆಳಿಗ್ಗೆ ಆದದ್ದೂ ಇಷ್ಟೆ...

ರವಿ ತನ್ನ ಬಸ್ ‘ಮಿಸ್’ ಮಾಡಿಕೊಂಡಿದ್ದ. ನಮ್ಮ ಬಸ್ಸಿಗೆ ಓಡೋಡಿ ಬಂದು ಹತ್ತಿದ. ಮೊದಲೇ ಒಡ್ಡು ಡ್ರೈವರ್.

‘‘ಬಸ್ ಪಾಸ್ ಇದೆಯೇನ್ರಿ?” ಒರಟಾಗಿ ಕೇಳಿದ.

‘‘ಇದೆ. ಪಾಸ್ ಇದೆ...’’ ಜೇಬಿನಲ್ಲಿ ತಡಕಾಡಿ, ಇವ ಪಾಸ್ ತೆಗೆದು ತೋರಿಸಿದ.